VIII. ಮ್ಯುನಿಸಿಪಲ್ ರೆಗ್ಯುಲೇಷನ್ 27-28ನೆ ಸೆಕ್ಷನ್‌ಗನುಗುಣವಾಗಿ ಮ್ಯಾನೇಜಿಂಗ್ ಕಮಿಟಿಯನ್ನು ರಿ-ಕಾನ್ಸ್ಟಿಟ್ಯೂಟ್ ಮಾಡತಕ್ಕ ವಿಚಾರದಲ್ಲಿ ವೈಸ್ ಪ್ರೆಸಿಡೆಂಟ್ ಸಾಹೇಬರವರ ಮೆಮೊ.

ಮ್ಯಾನೇಜಿಂಗ್ ಕಮಿಟಿ ಮತ್ತು ಹೆಲ್ತ್ ಕಮಿಟಿಗೆ ಬೇರೆ ಬೇರೆ ಈ ಕೆಳಗೆ ಕಂಡ ದೊಡ್ಡ ಮನುಷ್ಯರುಗಳನ್ನು ಮೆಂಬರುಗಳಾಗಿ ನಿಯಾಮಕ ಮಾಡಿರುತ್ತೆಂದು ತೀರ್ಮಾನಿಸಿದೆ :—

ಫೈನಾನ್ಷಿಯಲ್ ಕಮಿಟಿ.	ಮ್ಯಾನೇಜಿಂಗ್ ಕಮಿಟಿ.	ಹೆಲ್ತ್ ಕಮಿಟಿ.
ಮಿ॥ ಶ್ರೀಕಂಠಯ್ಯನವರು.	ವೈಸ್ ಪ್ರೆಸಿಡೆಂಟರವರು.	ಹೆಲ್ತ್ ಆಫೀಸರವರು.
,, ಕೃಷ್ಣಪ್ಪಾಜಿ ಅರಸಿನವರು.	ಮಿ॥ ಎಂ. ಸಿ. ರಂಗೈಯ್ಯಂಗಾರ್‌ರವರು.	ಮಿ॥ ವೆಂಕಟಕೃಷ್ಣಯ್ಯನವರು.
	,, ತಿರುವೆಂಗಡ ಮೊದಲಿಯಾರ್‌ರವರು.	,, ನರಸಿಂಹಸ್ವಾಮಿಗಳವರು.
	,, ಶ್ರೀಕಂಠಯ್ಯನವರು.	,, ಠಹಿಮತುಲ್ಲಾ ಸೇಟರವರು.
	,, ಅಂಣಯ್ಯಪಂಡಿತರವರು.	,, ಮಾದಪ್ಪನವರು.

IX. ಯುನಾನಿ ಹಕೀಂ ಸೈಯದ್ ಮುಸ್ತಾಫಾ ಸಾಹೇಬರವರು ತಮ್ಮ ಸಂಬಳವನ್ನು 60 ರೂಪಾಯಿಗೆ ಬಡ್ತಿ ಮಾಡಬೇಕೆಂದು ಬರೆದುಕೊಂಡಿರುವ ಅರ್ಜಿ ವಿಚಾರದಲ್ಲಿ ಸಿವಿಲ್ ಸರ್ಜ್ಜನರವರಿಂದ ಬಂದಿರತಕ್ಕ 10—12—08ನೆ ಮಕ್ರುಂ 1067ನೆ ನಂಬರ್ ಮೆಮೊ.

ಸಿವಿಲ್ ಸರ್ಜ್ಜನರವರ ಶಿಫಾರಸ್ ಅನುಮೋದಿಸಿ ಪ್ರಮೋಷನ್ ಕೊಡತಕ್ಕದ್ದೆಂದು ತೀರ್ಮಾನಿಸಿದೆ.

X. ಬೆಂಗಳೂರು ಸಿಟಿಯಲ್ಲಿ ಜಾರೀಲಿರುವ ಜನನ ಮರಣ ರಿಜಸ್ಟ್ರೇಷನ್ ಬೈಲಾಗಳನ್ನು ಮೈಸೂರು ಸಿಟಿಯಲ್ಲೂ ಅಂಗೀಕರಿಸತಕ್ಕದ್ದೆಂದು ಮಂಜೂರ್ಮಾಡಿ ಇರತಕ್ಕ 11—1—09ನೆ ಮಕ್ರುಂ 6412—ಮ್ಯು. 214-08ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

XI. 11—5—08ನೆ ಮಕ್ರುಂ 11612-5—ಮ್ಯು. 152-08ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ಮಂಜೂರಾಗಿರತಕ್ಕ ಕೆಲವು ಅಂದಾಜಾ ಪಟ್ಟಿಗಳಲ್ಲಿರುವ ಎಸ್ಟಾಬ್ಲಿಷ್‌ಮೆಂಟ್ ಮತ್ತು ಅಹನಿ ಸರಂಜಾಮುಗಳ ಖರ್ಚುಗಳನ್ನು ಬಿಟ್ಟುಪಡತಕ್ಕದ್ದೆಂದು ಬಂದಿರುವ 5—1—09ನೆ ಮಕ್ರುಂ 6203-5—ಮ್ಯು. 115-08ನೆ ನಂಬರು ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

XII. ಮ್ಯಾನೇಜಿಂಗ್ ಕಮಿಟಿ ಪ್ರೊಸೀಡಿಂಗ್ಸು.

ಖಾಯಂ ಮಾಡಿದೆ.

XIII. ಬೆಂಗಳೂರು ಮತ್ತು ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳ ಹೆಲ್ತ್ ಆಫಿಸರುಗಳನ್ನು ಪಬ್ಲಿಕ್ ಹೆಲ್ತ್‌ಗೆ ಸಂಬಂಧಪಟ್ಟ ವಿಷಯಗಳಲ್ಲಿ ಎಕ್ಸ್‌ಅಫಿಷಿಯೋ ವೈಸ್ ಪ್ರೆಸಿಡೆಂಟರಾಗಿ ನಿಯಾಮಕ ಮಾಡಿರುವ ವಿಷಯದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 12—1—09ನೆ ಮಕ್ರುಂ 6483-6—ಮ್ಯು. 127-07-13ನೆ ನಂಬರು ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

ಎಂ. ಕಾಂತರಾಜೇ ಅರಸ್, ಪ್ರೆಸಿಡೆಂಟ್.

ಮೆಮೋ.

ಮೈಸೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರ ಆಫೀಸಿಗೆ ನವಂಬರು ಮತ್ತು ಡಿಸೆಂಬರು ಮಾಹೆ ಅಕೌಂಟುಗಳನ್ನು 1909ನೆ ಜನವರಿ ತಾರೀಖು 21ರಲ್ಲು ಇನ್‌ಸ್ಪೆಕ್ಷನ್ ಮಾಡಿದ್ದರ ವಿವರ—

ಡಿಸೆಂಬರು ಮಾಹೆ ಆಕ್ಟ್ರಾಯಿ ವಸೂಲಿ ಗುದಸ್ತಾ ಸಾಲ್ ಈ ಮಾಹೇಲಿ ಆದದ್ದಕ್ಕಿಂತ ಎಂಭತ್ತೆಂಟು ಚಿಲ್ಲರೆ ಕಮ್ಮಿಯಾದದ್ದು ಹೆಚ್ಚಲ್ಲಾ. ದವಸಗಳ ತುಟಾರಿಯೇ ಕಾರಣವೆಂದು ಎಣಿಸಬೇಕಾಗಿದೆ.

ಆದರೆ ಕುರಿಗಳ ಬಿಕರಿ ಆವುದು ಮಾಮೂಲಿಗೆ ಕಮ್ಮಿಯಾಗಿಲ್ಲ. ಇದರ ಆವುದು ಖರ್ಚುಗಳಲ್ಲಿ ವ್ಯತ್ಯಸ್ಥ ನಡಿಯಲು ಮಾರ್ಗವಿದೆ. ಹ್ಯಾಗಂದರೆ ಬಂದ ಕುರಿಗಳನ್ನ ಚಿಲ್ಲರೆ ಬಾಂದೆರೆ ಕಟ್ಟೆಗಳಲ್ಲೂ, ಬಟ್ಟು ಸಾಯರ್ ಕುಡೇರಿಯಲ್ಲೂ ಸಹ ಹಾಸಲು ತೀರಿ ಅವುಗಳು ಈ ಷಹರನಲ್ಲೇ ನಿಂತು ಖರ್ಚಾಗತಕ್ಕದ್ದು. ಸ್ಲಾಟರ್ ಹೌಸಿಗೂ ನಿಲ್ಲತಕ್ಕವು ಇಲ್ಲಿಂದಲೇ ಮೇವು ಬಗ್ಗಿ ಊರು ಹೊರಗೆ ಹೋಗುತ್ತಲೇ ಇದೆ. ಕೆಲವು ಕೆಲವು ಸಂದರ್ಭಗಳಲ್ಲಿ ಮೇವಿಗೆ ಹೋಗುವ ರಾಸುಗಳಲ್ಲಿ ಹೊಸ ಆವುದು ರಾಸುಗಳು ಸೇರಿ ಹೋಗಿ ಹಾಸಲು ವಸೂಲಿಗೆ ವಂಚನೆ ನಡಿಯುತ್ತೆ. ಸ್ಲಾಟರು ಹೌಸಿನ ಖರ್ಚು ಲೆಕ್ಕ ಇಟ್ಟಿರುವದರಲ್ಲಿ ಮೇಲೆ ನಾನು ಹೇಳಿದ ಗಲಾಟೆಗೆ ಕಾರಣವಾಗಿ ಹಾಸಲು ವಸೂಲಿ ಕಮ್ಮಿ ಆಗಲು ಕಾರಣವಾಗಿದೆ. ಷಹರಿಗೆ ಬಂದೇ ಸ್ಲಾಟರು ಮನೆ ಇರುವದ್ದರಿಂದ ಆಯಾಯ ಖರ್ಚಿನ ರಾಸುಗಳ ಹಾಸಲು ಆಯಾವಾಡನೆ ವಸೂಲಾಗಿ ಸ್ಲಾಟರ್ ಹೌಸಿಗೆ ಹೋಗದೆ ಷಹರಿನಲ್ಲಿ ಚಿಲ್ಲರೆ ಹುಬ್ಬುಗಳಲ್ಲಿ ವಿನಿಯೋಗವಾಗತಕ್ಕ ರಾಸುಗಳ ಹಾಸಲು ಕಟ್ಟೆಯವರೇ ವಸೂಲು ತೆಗೆದುಕೊಳ್ಳಬೇಕು. ಸ್ಲಾಟರ್ ಹೌಸಿಗಾಗಿ ಹೋಗತಕ್ಕವುಗಳ ಚೀಟು ಈಗಿನ ಮಾಮೂಲ್‌ಮೇರೆ ಸ್ಲಾಟರ್ ಮನೆಬಳಿ ಇರುವ ದರೋಗರಲ್ಲಿ ಹಾಸಲು ವಸೂಲಾಗಬೇಕಾದ ವೆಗ್ಗೆರೆ ಕೆಲಸು ಏರ್ಪಾಡು ಆದರೆ ಈ ವಸೂಲಿ ಜಾಸ್ತಿಯಾಗಲು ಕಾರಣವಾಗುತ್ತೆ. ಅಥವಾ ಈ ಬಾಬು ನಮ್ಮ ಸಾಲೀಯಾನಾ ಆವುದು ಆವರೇಜು ನೋಡಿ ಹರಾಜು ಮಾಡೋಣಾದರೆ ಈ ಬಗೆ ಹುಟ್ಟುವಳಿ ವಸೂಲಾಗಿ ಇದೇಬಗ್ಗೆ ಇರತಕ್ಕ ಲವಾಜಮೇಲಿ ನೂರಾರು ರೂಪಾಯಿಖರ್ಚು ಕಮ್ಮಿಯಾಗಲು ಕಾರಣವಾಗಿದೆ.

2. ಲೈಟಿಂಗು ಛಾರ್ಜು ವಿಷಯ—

ಷಹರಿಗೆ ಎಲೆಕ್ಟ್ರಿಕ್ ದೀಪಗಳು ಆದರೂ ನಮಗೆ ಈಗಿನ ಮುಂತಲಿ 400 ಚಿಲ್ಲರೆ ಸಾಲೀಯಾನಾ 5,000 ರೂಪಾಯಿಗಳು ಉಂಟಾಗುತ್ತೆ. ಆದ್ದರಿಂದ ಈ ಮೊಬಲಗು ಆ ಇಲಾಖೆಯವರು ವಹಿಸಿಕೊಂಡು ಇರತಕ್ಕ ದೀಪಗಳ ಸ್ಥಳದಲ್ಲಿ ಎಲೆಕ್ಟ್ರಿಕ್ ದೀಪಗಳು ಇಡುವ ಏರ್ಪಾಡಾಗತಕ್ಕದ್ದು ಯುಕ್ತವಾಗಿದೆ.

3. ಮೊಹತರ್ಫಾ ಷಹರ್ ಬಾಬು ಹೇರಳವಾಗಿ ಲವಾಜಮೆ ಜಾಸ್ತಿ ಮೊಕರೂರಾಯ್ತು. ಈ ತಿಂಗಳ ಲವಾಜಮೆ ಖರ್ಚು 375, ವಸೂಲಿ 1,600 ಆಗಿರುವದು ಖುಷಿಳ ಕಮ್ಮಿಯಾಗಿದೆ.

ಬಾಕಿ ಜಮಾ ಖರ್ಚು ಸರಿಯಾಗಿದೆ.

(ಸೈನ್ಡ್) ಎಂ. ಹನೇ ಅಲ್ಲಿ ಬೇಗ್, ಮ್ಯುನಿಸಿಪಲ್ ಕೌನ್ಸಿಲರ್.